# ಹೌದು, ನೀನು ಮದುವೆಯಾಗುವ ಪ್ರಸ್ತಾಪ ಹೊಂದಿರುವಿಯಾ?

## ಮತ್ತಾಯ 19:3-9, ಒಂದು ನಿಕಟ ನೋಟ

ನಾನು ಮದುವೆಯ ಸಂಸ್ಕಾರವನ್ನು ಆರಂಭಿಸುವ ಮೊದಲು ಮದುವೆಯಾಗಲು ಸಿದ್ಧವಾಗಿರುವ ಜೋಡಿಗಳ ಸಂಗಡ ದೇವರು ಬಯಸುವ ಮದುವೆಯ ಕುರಿತು ಅನೇಕ ಸಾರಿ ಮಾತನಾಡುತ್ತೇನೆ. ಆದರೆ ನಾನು ಅವರಿಗೆ, ಕೆಲವು ವಾರ, ಕೆಲವು ದಿವಸ ಅಥವ ಕೆಲವು ತಾಸುಗಳ ಮೊದಲು, ಮದುವೆಯ ಕುರಿತ ಆಲೋಚನೆಗಳನ್ನು ನೀಡುತ್ತೇನೆ. ಆ ಸಮಯದಲ್ಲಿ, ನಾನು ಅವರಿಗೆ ಕೇವಲ ಕೆಲವು ವಿಚಾರಗಳನ್ನು ಮಾತ್ರ ತಿಳಿಸಲು ಅವಕಾಶವಿರುತ್ತದೆ. ಆದರೆ ಕೆಲವಾರು ವರ್ಷಗಳ ಹಿಂದೆಯೇ ಮದುವೆಯ ಬಗ್ಗೆ ಅವರು ಯೋಚಿಸುವ ಸಮಯದಲ್ಲಿ ನಾನು ಅವರಿಗೆ ಆಪ್ತ ಸಲಹೆಯನ್ನು ನೀಡಿದ್ದರೆ ಅದು ಒಳತಾಗುತ್ತಿತ್ತು ಎಂದು ಭಾವಿಸುತ್ತೇನೆ ಅದನ್ನೆ ನಾನು ಇಲ್ಲಿ ತಿಳಿಸುತ್ತಿದ್ದೇನೆ.

ಆದ್ದರಿಂದ ನಾನು ಈ ಪ್ರಸಂಗವನ್ನು, "ಹೌದು ನೀನು ಮದುವೆಯಾಗುವ ಪ್ರಸ್ತಾಪವನ್ನು ಹೊಂದಿರುವೆಯಾ?"[1] ಎಂಬ ಶೀರ್ಷಿಕೆಯನ್ನು ನೀಡಿರುವೆನು. ಆರಾಧನೆಯ ಮೊದಲು, ಮದುವೆಯ ವಿಚಾರದಲ್ಲಿ ಮಾತನಾಡಬೇಕು ಎಂದು ತಮ್ಮ ಒಳಗೆ ಬಂದು ಒಂದು ಜೋಡಿ, ಯುವಕ, ಯುವತಿಯ ಕುರಿತು ನೀಲ್ ಪ್ರೆಯರ್‌ರವರು ತಿಳಿಸಿದರು. ಆ ಪ್ರಸಂಗಿಯು ಆರಾಧನೆಯ ನಂತರ ಅವರೊಂದಿಗೆ ಮಾತನಾಡುತ್ತೇನೆ ಅಂದರು. ಆರಾಧನೆಯ ನಂತರದಲ್ಲಿ ಪ್ರಸಂಗಿಯು ಅವರ ಹೆಸರನ್ನು ಮರೆತು ಹೋದದ್ದರಿಂದ, "ಮದುವೆ ಆಗ ಬಯಸುವವರು, ಆರಾಧನೆಯ ನಂತರ, ನನ್ನ ಕೊಠಡಿಗೆ ಬರಬಹುದು" ಎಂದು ಪ್ರಕಟಿಸಿದರು. ನೀಲ್‌ರವರ ಪ್ರಕಾರ ಒಬ್ಬ ಯುವಕ ಹಾಗೂ ಒಬ್ಬ ಹನ್ನೆರಡು ಜನ ಯುವತಿಯರು ಅವರ ಕೊಠಡಿಗೆ ಬಂದರು.[2] ಅವರಲ್ಲಿ ಎಲ್ಲಾರೂ ಮದುವೆಯಾಗದವರೇ, ಗಂಡಿರಲೇ ಹೆಣ್ಣಿರಲೀ ಅವರು ಮದುವೆಯ ಬಗ್ಗೆ ಆಲೋಚಿಸಿದಾದರೆ. ಜೀವನವನ್ನು, ಜೀವನ ಪರ್ಯಾಂತರಕ್ಕೆ ಸಮರ್ಪಿಸಿಕೊಳ್ಳುವ ಮೊದಲು, ಅದಕ್ಕೆ ಗಂಭೀರವಾದ ಆಲೋಚನೆಯನ್ನು ನೀಡಲೇಬೇಕು.

ಯೌವನಸ್ಥರ ಬಳಿ ಮದುವೆಯ ಬಗ್ಗೆ ನಾನು ಮಾತನಾಡುವಾಗ ಸಾಮಾನ್ಯವಾಗಿ ಮತ್ತಾಯ 19:3-9ನ್ನು ವ್ಯಾಖ್ಯಾನಿಸುತ್ತೇನೆ.[3] ಈಗಲೂ ಇದನ್ನೇ ನಿಮ್ಮ ಸಂಗಡ ಮಾತನಾಡುತ್ತೇನೆ.[4]

### ಮದುವೆಯು ದೇವರಿಂದ ನೇಮಕವಾಗಿದೆ (ಮತ್ತಾಯ 19:4-6)

"ಮನುಷ್ಯರನ್ನು ನಿರ್ಮಾಣ ಮಾಡಿದವನು ಆದಿಯಿಂದಲೇ ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನು" (ಮತ್ತಾಯ 19:4, 5). ದೇವರು ಲೋಕವನ್ನು ಉಂಟು ಮಾಡಿದಾಗ "ಒಂಟಿತನವು" ಒಳ್ಳೆಯದಲ್ಲಾ ಎಂದು ನಿರ್ಣಯಿಸಿದನು (ಆದಿಕಾಂಡ 2:18). ದೇವರು ಅವನಿಗೆ ಸರಿಬೀಳುವ ಸಹಕಾರಿಯನ್ನು ಉಂಟುಮಾಡುವೆನು" ಅಂದನು (ಆದಿಕಾಂಡ 2:18).[5] ಸ್ತ್ರೀಯ ಸೃಷ್ಟಿಯ ಬಗ್ಗೆ ಆದಿಕಾಂಡ 2:21, 22ರಲ್ಲಿ ಬರೆದದೆ. ಪತಿಯನ್ನು ದೇವರು

ಮನುಷ್ಯನ ತಲೆಯಿಂದ ಉಂಟುಮಾಡದೆ ಇರುವದರಿಂದ, ಆಕೆ ಅವನ ಮೇಲೆ ಆಡಳಿತ ನಡೆಸಲಾರಳು, ಅವನ ಪಾದದಿಂದಲೂ ಸೃಷ್ಟಿಸಲಿಲ್ಲ, ಏಕೆಂದರೆ, ಅವನು ಅವಳನ್ನು ಪಾದದ ಕೆಳಗೆ ತುಳಿಯಬಾರದೆಂದು ಆತನಿಗೆ ಪ್ರೀತಿಪಾತ್ರಳಾಗಿರಲೀ ಎಂದು, ಅವನ ಪಕ್ಕೆಯಿಂದ ಅವಳನ್ನು ಸೃಷ್ಟಿಸಿದನು, ಆದ್ದರಿಂದ ಅವನು ಅವಳಿಗೆ ಸುರಕ್ಷಯನ್ನು ನೀಡಬೇಕು.

ಮದುವೆಯು ದೈವತ್ವದ ಮೂಲವನ್ನು ಹೊಂದಿರುವದರಿಂದ, ದೇವರೇ ಅದಕ್ಕೆ ಆಡಳಿತಗಾರ ಸಂತೋಷದ ಮದುವೆ, ದೇವರು ಮೆಚ್ಚುವ ಮದುವೆ, ಅದು ದೇವರ ವಾಕ್ಯದ ಬುನಾದಿಯ ಮೇಲೆ ಕಟ್ಟಲ್ಪಡಬೇಡಕು.

## ಮದುವೆಗೆ ಸಿದ್ಧತೆಯ ಅಗತ್ಯವಿದೆ
## (ಮತ್ತಾಯ 19:4-6)

ಉತ್ತಮವಾದ ಮದುವೆಗಳು ಹಾಗೆಯೇ ಆಗುವದಿಲ್ಲ. ಮದುವೆಗೆ ಸಂಬಂದಪಟ್ಟ ಕೆಲವು ನಿಯಮಗಳು ವಾಕ್ಯಲ್ಲಿ ಅಡಕವಾಗಿವೆ.

ಮದುವೆಯು *ವೃತ್ಯಾಸವುಳ್ಳದು:* "ಈ ಕಾರಣದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು" (ವಚನ 4). ಮದುವೆಯು ನೂತನ ಸಂಬಂಧವು ಒಂದು ಪ್ರತಿಸ್ಥಾಪನೆ (ರೋಮಾಪುರ 1:26, 27).

- ಸಾಧ್ಯವಾದರೆ, ಅದು ಒಂದು ದೈಹೀಕವಾದ ಪ್ರತ್ಯೇಕತೆ ಯೌವನಸ್ಥ ದಂಪತಿಗ ಳು ತಮ್ಮದೇ ಆದ ಮನೆಯನ್ನು ಹೊಂದಿರಬೇಕು. ದಾಂಪತ್ಯದಲ್ಲಿ ಉಂಟಾಗುವ ಮೊದಲ ಮೂರು ಅಡ್ಡಿಗಳಲ್ಲಿ, ಅತ್ತೆ ಹಾಗೂ ಮಾವ ಇವರ ಸಂಬಂಧಗಳಲ್ಲಿ ಉಂಟಾಗುವ ಅಡ್ಡಿ ಪ್ರಥಮವಾಗಿರುತ್ತದೆ.
- ಆರ್ಥಿಕ ಸದೃಡತೆಯನ್ನು ಹೊಂದಿರಬೇಕು. ಕುಟುಂಬದ ಆರ್ಥಿಕ ಮುಗ್ಗಟ್ಟನ್ನು ಸರಿದೂಗುವವರೆಗೆ ಒಬ್ಬನು ಮದುವೆಯಾಗಬಾರದು.[7] ಮೂರು ಪ್ರಮುಖ ಅಡ್ಡಗಳಲ್ಲಿ ಆರ್ಥಿಕ ಮುಗ್ಗಟ್ಟು ಸಹ ಒಂದಾಗಿರುತ್ತದೆ.
- ಅದು ಒಂದು ಮಮತೆಯ ಪ್ರತ್ಯೇಕತೆಯಾಗಬೇಕು. ಹುಡುಗನು, "ನನ್ನ ತಾಯಿಯ ಅಡಿಗೆಯಂತಿರುವದಿಲ್ಲ" ಅನ್ನದೆ, ಸ್ತ್ರೀ, ತನ್ನ ಗಂಡನಿಗೆ "ಆ ಕೆಲಸ ನನ್ನ ತಂದೆಗೆ ಚೆನ್ನಾಗಿ ತಿಳಿದಿರುತ್ತದೆ" ಎಂದು ಹೇಳಬಾರದು. ಈ ರೀತಿ ಹೇಳುವವರು. "ತಮ್ಮ ತಂದೆ ತಾಯಿಗಳಿಂದ ಇನ್ನು ಪ್ರತ್ಯೇಕವಾಗಿರುವದಿಲ್ಲಾ" ಮದುವೆಯ ನಂತರವೂ ನೀವುಗಳು ನಿಮ್ಮ ತಂದೆತಾಯಿಗ ಳನ್ನು ಪ್ರೀತಿಸುವಿರಾದರೋ, ನಿಮ್ಮ ಸಂಬಂಧ ವಿಭಿನ್ನವಾಗಿರುತ್ತದೆ. ಮದುವೆಯಾದಾಗಿನಿಂದ ನಿಮ್ಮ ಸಹಕಾರಿಯ ನಿಮ್ಮ ಜೀ ವಿತದ ಪ್ರಮುಖ ವ್ಯಕ್ತಿಯಾಗಿರುತ್ತಾರೆ.

ಸೇರಿಕೊಳ್ಳುವದು ಮದುವೆಯಾಗಿದೆ. ಪುರುಷನು ತಂದೆ ತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು (ಮತ್ತಾಯ 19:5; KJV). "ಸೇರಿಕೊಳ್ಳುವನು"[8] ಎಂಬ ಪದದ ಇಬ್ರಿಯ ಅರ್ಥ ಅಂಟಿಕೊಳ್ಳುವನು"[9] ಎರಡು ಹಲಿಗೆಗಳನ್ನು ಅಂಟನ್ನು ಬಳಸಿ ಅಂಟಿಸುವದಾದರೆ, ಅದು ಹಲಿಗೆಗಳಿಗಿಂತ ಗಟ್ಟಿಯಾಗಿರುತ್ತದೆ. ಅವುಗಳನ್ನು ಎಂದಿಗೂ ಪ್ರತ್ಯೇಕ ಮಾಡಲಾಗದು, ಯಾವದಾದರು ಕಾರಣದಿಂದ ಅವುಗಳಿಂದ ಬೇರ್ಪಡಿಸುವದಾದರೆ, ಅವುಗಳಲ್ಲಿ ಒಂದು ಬಹಳ ಹಾಳಾಗಿಹೋಗುತ್ತದೆ.

ಮದುವೆ *ಐಖ್ಯತೆಯನ್ನು* ಹೊಂದಿದೆ: ಅವರು ಇನ್ನು ಇಬ್ಬರಲ್ಲಾ, ... ಒಂದೇ ಶರೀರವಾ ಗಿದ್ದಾರೆ (ವಚನಗಳು 5ಬಿ, 6ಎ; NASB, 1977).

- ಅದು ಕಾನೂನು ಬಾಹೀರವಾಗಿರಬಾರದು, ದೇಶದ ಕಾನೂನನ್ನು ಪಾಲಿಸಬೇಕು. ಅಂದರೆ ದಾಂಪತ್ಯದ ಕಾನೂನನ್ನು ಪಾಲಿಸಬೇಕೆಂದು ವಾಕ್ಯವು ತಿಳಿಸುತ್ತದೆ (ರೋಮಾಪುರ 13:1).
- ದೈಹೀಕ ಐಕ್ಯತೆ ಇರಬೇಕು. "ಒಂದೇ ದೇಹ" ಅಂದರೆ "ಲೈಂಗಿಕ ಸಂಬಂಧ" ಎಂದಿರುತ್ತದೆ (1 ಕೊರಿಂಥ 6:16). ದಾಂಪತ್ಯ ಸಂಬಂಧದಲ್ಲಿ ಇದು ಸುಂದರವಾದ ಕ್ರಿಯೆಯಾಗಿದ್ದರೆ, ದಾಂಪತ್ಯದ ಹೊರತು ಕೆಟ್ಟದಾಗಿರುತ್ತದೆ. ಪ್ರಣಯಾಚರಣೆ ಒಂದು ಪ್ರಯೋಗವಲ್ಲ. ಲೈಂಗೀಕ ಕ್ರಿಯೆಯು ಸಮಯ ತಾಳ್ಮೆ, ವ್ಯಕ್ತಿತ್ವಕ್ಕೆ ಗೌರವವನ್ನು ಹೊಂದಿರುತ್ತದೆ. ಮದುವೆಯ ಸಂಬಂಧದಲ್ಲಿ ಲೈಂಗಿಕ ಕ್ರಿಯೆಯು ಮೂರನೆಯ ಪ್ರಮುಖ ಸಂಗತಿಯಾಗಿರುತ್ತದೆ.
- ಉದ್ವೇಗದ ಐಕ್ಯತೆ (ಎಫೆಸ 5:28, 29). ಪರಸ್ಪರ ಸಂಭಾಷಣೆ ಹಾಗೂ ಒಟ್ಟಾಗಿ ಮಾಡುವ ಕ್ರಿಯೆಯಾಗಿರುತ್ತದೆ. ಅದನ್ನು ಅಪ್ರಯೋಜನಪಡಿಸಿಕೊಳ್ಳಬಾರದು; ದಾಂಪತ್ಯವನ್ನು ಜೀವನ ಪರ್ಯಂತರ ಕಟ್ಟಿಕೊಳ್ಳಬೇಕು.
- ಎಲ್ಲದಕ್ಕಿಂತ ಪ್ರಮುಖವಾಗಿ ಆತ್ಮೀಕ ಐಕ್ಯತೆ ಇರಬೇಕು: ಕ್ರಿಸ್ತನಿಗೂ ಮತ್ತು ಸಭೆಗೂ ಇರುವಂಥ ಅನ್ಯೋನ್ಯತೆ ಇರಬೇಕು (ಎಫೆಸ 5:31-33). ನಂಬಿಗಸ್ತರಾದ ಜೀವನ ಸಂಗಾತಿಗಳನ್ನು ಪಡೆಯುವದಕ್ಕಾಗಿ ಪ್ರಾರ್ಥಿಸಿರಿ, ಅಂದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆ ಹಾಗೂ ತಿಳುವಳಿಕೆಯಲ್ಲಿ ಇಬ್ಬರೂ ವೃದ್ಧಿ ಹೊಂದುವದಕ್ಕೆ ಸಾಧ್ಯವಿದೆ (2 ಪೇತ್ರ 3:18). ಪರಸ್ಪರ ಪ್ರೀತಿಯನ್ನು ದೇವರ ಮೇಲೆ ಇಟ್ಟಿರುವದರಿಂದ ಮದುವೆಯ ಬಾಂದವ್ಯವು ದೃಢವಾಗಿರುತ್ತದೆ.

## ಮದುವೆಯ ಜೀವನಕ್ಕಾಗಿ (ಮತ್ತಾಯ 19:6-9)

ಮದುವೆಯ ನಿರಂತರವಾದದ್ದು ಎಂದು ಅರಿಯುವದು ಪ್ರಮುಖವಾಗಿದೆ: "ದೇವರು ಕೂಡಿಸಿದ್ದನ್ನು ಮನುಷ್ಯರು ಅಗಲಿಸಬಾರದು" (ಮತ್ತಾಯ 19:6ಬಿ).[10] ದೇವರು ಪತ್ನಿತ್ಯಾಗವನ್ನು ದ್ವೇಷಿಸುತ್ತಾನೆ (ಮಲಾಕಿ 2:16). "ಇದು ಜೀವನ ಪರ್ಯಂತರ ಸಂಬಂಧ" ಎಂದು ತಿಳಿದು, ದಾಂಪತ್ಯ ಜೀವನವನ್ನು ಆಯ್ಕೆಮಾಡಿಕೊಳ್ಳಿ. ಇಲ್ಲದೆ ಹೋದರೆ ದೊಡ್ಡ ನಷ್ಟವಾಗುತ್ತದೆ. ನಿಮ್ಮ ದಾಂಪತ್ಯ ಜೀವನದಲ್ಲಿ ಒಡಕು ಉಂಟಾದರೆ ಪರಿತ್ಯಾಗ ಉತ್ತರವಲ್ಲ. ಕರ್ತನ ಚಿತ್ತವನ್ನು ನೆರವೇರಿಸಲುಸಿದ್ಧರಾದ ದಂಪತಿಗಳು, ಆತನ ಸಹಾಯದಿಂದ ಸಮಸ್ಯೆಯನ್ನು ಹಾದುಹೋಗಬಹುದು (ಫಿಲಿಪ್ಪಿ 4:13).

## ಮುಕ್ತಾಯ

ನಾನು ಈ ಸಂಗತಿಯನ್ನು ಯೌವನಸ್ಥರೊಂದಿಗೆ ಮಾತನಾಡುತ್ತಿದ್ದರೆ, ಅವರು ಈ ಕುರಿತು ಪ್ರಶ್ನೆಗಳನ್ನು ಕೇಳಬಹುದು. ನಾನು ಹೇಳಿದ ಸಂಗತಿಗಳಲ್ಲಿ ಪ್ರಶ್ನೆಗಳನ್ನು ಕೇಳಬಹುದು.[11] ನನ್ನ ಮಾತುಗಳ ಸಹಾಯದಿಂದ, ನಿಮ್ಮಲ್ಲಿ ಯಾರಾದರು ಮದುವೆಯಾಗಲು ನಿಶ್ಚಯಿಸಿದ್ದರೆ - ದೇವರು ನಿಮ್ಮನ್ನು ಪ್ರೋತ್ಸಾಹಿಸಲಿ ಹಾಗೂ KJV, ವೇದದ ಪ್ರಕಾರ ನಿಮ್ಮ ಕೈಗಳನ್ನು ಕರ್ತನು ಬಲಪಡಿಸಲಿ (1 ಸಮುವೇಲ 23:16). ದೇವರು ನಿಮ್ಮನ್ನು ಆಶೀರ್ವದಿಸಿ, ಕಾಯ್ದು ಕಾಪಾಡಲಿ (ಅರಣ್ಯಕಾಂಡ 6:24).

ಟಿಪ್ಪಣಿಗಳು


[1]ನವಂಬರ್ 1961 ವ್ಯಾಗನಾಲ್ ಯೌವನಸ್ಥ ಗುಂಪಿನವರೊಂದಿಗೆ ಈ ವಿಷಯವನ್ನು ಬೋಧಿಸಿದ್ದೇನೆ. 1985ರಲ್ಲಿ ನೀಲ್ ಪ್ರಯರ್. ಬ್ರೌನ್ ಟ್ರೈಲ್ ಸಭೆಯಲ್ಲಿ "ಹೌದು ನೀನು ಮದುವೆಯಾಗುವ ಪ್ರಸ್ತಾಪ ಹೊಂದಿರುವೆಯಾ" ಎಂಬುದರ ಬಗ್ಗೆ ಮಾತನಾಡಿದರು. ಶೀರ್ಷಿಕೆ ಒಂದೇ ಆದರೂ ಅದರ ವಿವರಣೆ ಬೇರೆಯಾಗಿತ್ತು. ಕಥೆಯನ್ನು ಹಿಂಬಾಲಿಸುವದು ಪ್ರಯರ್‌ರವರ ಪಾಠದಿಂದ ತೆಗೆದುಕೊಳ್ಳಲಾಗಿದೆ. [2]"ನನ್ನನ್ನು ಬೇಸರ ಪಡಿಸಬೇಡ. ಪ್ರಯರ್‌ರವರ ಹೇಳಿಕೆ, ಜ್ಞಾಪಕದಲ್ಲಿಟ್ಟಿಕೋ?" [3]ಇದರ ಹಿನ್ನೆಲೆಯನ್ನು ಹೇಳಿ, ಅದು ಮುಂದಿನ ಪಾಠದಲ್ಲಿ ಕೊಡಲಾಗಿದೆ. [4]ಇಲ್ಲಿ ಕೊಟ್ಟ ವಿಷಯಗಳು ನನ್ನ ಹೇಳಿಕೆಯ ಸಂಕ್ಷಿಪ್ತ ವರ್ಣನೆಯಾಗಿದೆ. ಅದನ್ನು ನೀನು ವಿಸ್ತರಿಸಿ, ಉದಾಹರಿಸಿ, ಅನ್ವಯಿಸಿ ಹೇಳಬಹುದು. [5]KJVಯಲ್ಲಿ, "ಸಹಾಯ ನೀಡುವ." ಈ ಆಂಗ್ಲ ಪದವು "ಯೋಗ್ಯವಾದ" ಎಂಬ ಅರ್ಥಕೊಡುತ್ತದೆ. [6]ವಿವಾಹದ ಸಮಸ್ಯೆಗಳ ಮತಗಟ್ಟೆಯ ಬಗ್ಗೆ ವ್ಯತ್ಯಾಸಗಳುಂಟು, ಆದರೆ ಅತ್ತೆಮಾವದಿಂದರು, ಹಣ, ಲೈಂಗಿಕ ಸಮಸ್ಯೆಗಳು ಪಟ್ಟಿಯ ಮೊದಲನೆಯದಾಗಿವೆ. [7]ಪುರುಷನು ಹೆಂಡತಿಗೆ "ತಲೆ" (ಎಫೆಸ 5:23). ಅದು ಜವಾಬ್ದಾರಿಯಾಗಿದೆ (ಎಫೆಸ 5:28, 29), ಆರ್ಥಿಕ ಜವಾಬ್ದಾರಿಯೂ ಸೇರಿದೆ. ಇದಕ್ಕಾಗಿ ಗಂಡ ಹೆಂಡತಿ ಇಬ್ಬರೂ ದುಡಿಯಬಹುದು, ಆದರೆ ಕುಟುಂಬದ ಭೌತಿಕವಾದ ಅವಶ್ಯಕತೆಗಳನ್ನು ನೀಡುವ ಜವಬ್ದಾರಿ ಗಂಡ/ತಂದೆಯದಾಗಿದೆ. [8]"ಅಂಟಿಕೋ" ಎಂಬುದು ಆದಿಕಾಂಡ 2:24ರಲ್ಲಿ ಭಾಷಾಂತರಿಸಿದ ಪದವಾಗಿದೆ. [9]Don and Jane McWhorter, *Living Together in Knowledge* (Huntsville, Ala.: Publishing Designs, 1988), 60. (Emphasis theirs.) [10]ವಚನಗಳು 7 ಮತ್ತು 9ನ್ನು ವಿವರಿಸಿದ್ದೇನೆ ನೋಡಿ "ಮದುವೆ ಹಾಗೂ ಪರಿತ್ಯಾಗದ ಕುರಿತ ಉಪದೇಶ" ಎಂಬ ಚಿಕ್ಕ ಪಾಠವನ್ನು ನೋಡಿ.

[11]ಈ ವಾಕ್ಯವು ಈ ವಿಷಯಗಳನ್ನು ಒಂದು ಪ್ರಸಂಗದಲ್ಲಿ ಬಳಸಲಾಗಿದೆ ಎಂದು ಊಹಿಸುತ್ತದೆ. ಅದು ಒಂದು ತರಗತಿಯಲ್ಲಿ ಬಳಸಿದ್ದರೆ, ಪ್ರಶ್ನೆಗಳನ್ನು ಪ್ರೋತ್ಸಾಹಿಸಿ ಪಾಠ ಹೇಳಬಹುದು.


## ಮದುವೆ ಹಾಗೂ ಪರಿತ್ಯಾಗದ ಕುರಿತ ಉಪದೇಶ

ವಿಚ್ಛೇದನವು ಅಧಿಕವಾಗಿರುವದರಿಂದ, ಇದರ ಉಪದೇಶಗಳು ಅಧಿಕವಾಗುವ ಬದಲು ಅಲ್ಪವಾಗುತ್ತವೆ. ಒಂದು ವೇಳೆ ಪ್ರಸಂಗಿಗಳು ಇದನ್ನು ಬೋಧಿಸಲು ಅಂಜಬಹುದು. "ನಿಮ್ಮಲ್ಲಿ ಕೆಲವರು ಪರಿತ್ಯಾಗದ ಆಲೋಚನೆಯಲ್ಲಿರಬಹುದು" ಎಂದು ಹೇಳುತ್ತಾ ನಾನು ಇದರ ಕುರಿತ ಪಾಠವನ್ನು ಆರಂಭಿಸುತ್ತೇನೆ. ಒಂದು ವೇಳೆ ಸಂಬಂಧ ಪಡದಿದ್ದರೂ, ಯೌವನಸ್ಥರಿಗೆ, ನಾನು "ಮದುವೆಯ ಜೀವಿತದ ಪ್ರಮುಖಭಾಗ" ಎಂದು ಉಪದೇಶಿಸುತ್ತೇನೆ. ಇದರಲ್ಲಿ ನಾನು ಸಕರಾತ್ಮಕವಾದ ಭಾವವನ್ನು ಕಂಡಿದ್ದೇನೆ. ಮತ್ತಾಯ 19:3-9 ಮತ್ತು ಮಾರ್ಕ 10:2-12ರಿಂದ ಪ್ರಮುಖ ಅಂಶವನ್ನು ಬೋಧಿಸುತ್ತೇನೆ.


ಪುರುಷನು ಸ್ತ್ರೀಯನ್ನು ಸೇರಿಕೊಳ್ಳುವದನ್ನು ಯೇಸು ಮಾತಾಡಿದರು (ಮತ್ತಾಯ 19:4, 5).




ನೈತಿಕವಾಗಿ ಅವರು ಒಂದಾಗಿದ್ದಾರೆ,[1] *ದೇವರು* ಸಹ ಅವರನ್ನು "ಒಂದು" ಮಾಡಿರುವನು (ಮತ್ತಾಯ 19:6).




ಮನುಷ್ಯರಿಂದ ಅವರು "ಪ್ರತ್ಯೇಕ" ಮಾಡಲ್ಪಟ್ಟರೂ (ಮತ್ತಾಯ 19:6) - ವಿಚ್ಛೇದನ (X) - ಅವರು ದೇವರಿಂದ ಒಂದು ಮಾಡಲ್ಪಟ್ಟಿದ್ದಾರೆ.





ಅಂದರೆ ಅವರು ಇನ್ನೂ ದಾಂಪತ್ಯದ ಸಂಬಂದದಲ್ಲಿದ್ದಾರೆ.

"ಮತ್ತು ಹಾದರದ ಕಾರಣದಿಂದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟು ಮತ್ತೊಬ್ಬಳನ್ನು ಮದುವೆಮಾಡಿಕೊಳ್ಳುವವನು ವ್ಯಭಿಚಾರ ಮಾಡುವವನಾಗುತ್ತಾನೆಂದು ನಿಮಗೆ ಹೇಳುತ್ತೇನೆ ಅಂದನು" (ಮತ್ತಾಯ 19:9).[2] ಯಾಕಂದರೆ, ದೇವರ ದೃಷ್ಟಿಯಲ್ಲಿ ಅವನು ಇನ್ನು ಮದುವೆ ಯಾದವನೇ.




ಪುರುಷನಿಗೆ ತ್ಯಾಗ ಪತ್ರ ನೀಡಿದ ಸ್ತ್ರೀಯ ಪರಿಸ್ಥಿತಿಯು ಇದೇ ಆಗಿರುತ್ತದೆ (ಮಾರ್ಕ 10:12).




ಒಂದು ವೇಳೆ ಸಹವರ್ತಿಯು ದಾಂಪತ್ಯದಲ್ಲಿ ಅಪನಂಬಿಗಸ್ಥರಾಗಿದ್ದರೆ ತ್ಯಾಗಪತ್ರನೀಡ ಬಹುದು.[3] ಈ ವಿಚಾರದಲ್ಲಿ ಮುಗ್ಧರಾದವರು, ಆಕೆಗೆ ಅಥವಾ ಅವನಿಗೆ ತ್ಯಾಗಪತ್ರವನ್ನು ನೀಡಿ, ಮರುಮದುವೆಯಾಗಬಹುದು.[4] ಅದು ದೇವರನ್ನು ಅವಮಾನ ಪಡಿಸುವ ರೀತಿ ಯಾಗಿರಬಾರದು.[5]

ಟಿಪ್ಪಣಿಗಳು

[1]ನಾವು ದೇಶದ ನಿಯಮಗಳನ್ನು ಪಾಲಿಸಬೇಕು ಎಂದು ವಾಕ್ಯ ಹೇಳುತ್ತದೆ (ರೋಮಾಪುರ 13:1). [2]"ವ್ಯಭಿಚಾರ" ಅಂದರೆ ಲೈಂಗಿಕ ಪಾಪ" ಎಂಬ ಗ್ರೀಕ್ ಅನುವಾದ. ವಿಮೋಚನಕಾಂಡ 20:14 ಅದರಲ್ಲಿ ಮದುವೆಯಾದ ಒಂದು ವ್ಯಕ್ತಿ ಒಳಗೊಂಡಿರುತ್ತಾರೆ. [3]"ಹಾದರ" ಲೈಂಗಿಕ ಪಾಪಕ್ಕೆ ಸಂಬಂಧಪಟ್ಟದ್ದು. ಈಗಾಗಲೇ ಮದುವೆಯಾಗಿರುವ, ವ್ಯಕ್ತಿಗಳ ನಡುವೆ "ಕುಟುಂಬ ಬಾಹಿರ ಸಂಬಂಧ" ಮದುವೆಯ ನಂತರದ ಪಾಪ. [4]ನ್ಯಾಯಯುತವಾದ ಪರಿತ್ಯಾಗ ಹಾಗೂ ಇನ್ನೊಬ್ಬರನ್ನು ಮದುವೆಯಾಗುವದು. "ಅನೈತಿಕತೆಯಲ್ಲಾ." ಆದರೆ ಈ ವಾಕ್ಯಭಾಗದಲ್ಲಿ ತ್ಯಾಗಪತ್ರ ನೀಡಿದರು, ಪುನ ಮದುವೆಯಾಗುವ ವಿಚಾರವು ಇರುವದಿಲ್ಲ ಎಂಬುದು ಕೆಲವರ ಅಭಿಪ್ರಾಯ. [5]ಮುಗ್ದರು ತ್ಯಾಗಪತ್ರವನ್ನು ನೀಡಬಹುದು. ಅದು ಅಪ್ಪಣೆಯಲ್ಲಾ. ''ವಾಕ್ಯದ ಕಾರಣ''ವಿದ್ದರೂ, ಪರಿತ್ಯಾಗಮಾಡುವದನ್ನು ಹಗುರವಾಗಿ ತೆಗೆದುಕೊಳ್ಳಬಾರದು. "ಮಕ್ಕಳ" ವಿಚಾರವಿರುವದರಿಂದ, ಅದನ್ನು ಪರಿಹರಿಸಿಕೊಳ್ಳಬೇಕು, "ಉತ್ತಮ ಪರಿತ್ಯಾಗ" ಎಂಬುದಾಗಿರುವದಿಲ್ಲಾ.